ಸಲ್ಮಾನ್ ಖುರ್ಶಿದ್ ವಿದೇಶಾಂಗ ವ್ಯವಹಾರಗಳ ಸಚಿವರು

ನಂ: 10577/ಇಎಂ/2013
ದಿನಾಂಕ: ಡಿಸೆಂಬರ್ 13, 2013
ಗೆ,
ಮಾನ್ಯ ಸಭಾಪತಿಗಳು
ರಾಜ್ಯ ಸಭೆ
ನವದೆಹಲಿ

ಮಾನ್ಯರೆ,
ರಾಜ್ಯ ಸಭೆ ವಿರೋಧ ಪಕ್ಷದ ನಾಯಕರಾದ ಶ್ರೀ ಅರುಣ್‌ಜೇಟ್ಲಿಯವರು ಬಾಂಗ್ಲಾದೇಶದೊಂದಿಗೆಗಡಿ ಭೂಮಿಒಪ್ಪಂದಕುರಿತು ಸಂವಿಧಾನದ(ಒಂದು ನೂರ ಹತ್ತೊಂಬತ್ತನೆ) ತಿದ್ದುಪಡಿ 2013ರ ಮಸೂದೆಗೆತಮ್ಮ ವಿರೋಧ ವ್ಯಕ್ತಪಡಿಸಿ ರಾಜ್ಯ ಸಭಾ ಮಹಾ ಕಾರ್ಯದರ್ಶಿಯವರಿಗೆ ಡಿಸೆಂಬರ್ 5, 2013ನೇ ದಿನಾಂಕದ ಪತ್ರ ನೀಡಿದ್ದು, ಅದಕ್ಕೆ ಪ್ರತಿಕ್ರಿಯೆಇಂತಿದೆ;

ಭಾರತದಗಡಿ ವಿಚಾರವು ಸಂವಿಧಾನದ ಮೂಲ ಸ್ವರೂಪದ ಭಾಗವಾದಕಾರಣ ಭಾರತದಗಡಿಯನ್ನು ಬದಲಾಯಿಸಲು ಶಾಸಕಾಂಗ ತಿದ್ದುಪಡಿತರುವಅಧಿಕಾರವನ್ನು ಶಾಸನಸಭೆ ಹೊಂದಿಲ್ಲವೆಂದು ಶ್ರೀ ಅರುಣ್‌ಜೇಟ್ಲಿ ಬರೆದಿದ್ದಾರೆ.

ಆದರೆಇದು ಸರಿಯಾದ ವಿಚಾರವಲ್ಲ. ಭಾರತ ಸರ್ವಸ್ವತಂತ್ರರಾಷ್ಟ್ರವಾಗಿದ್ದು ವಿದೇಶಿ ನೆಲೆಯನ್ನು ಪಡೆಯುವ, ಅದಲುಬದಲು ಮಾಡುವಅಥವಾ ನಮ್ಮ ಪ್ರದೇಶವನ್ನುಅನ್ಯರಾಷ್ಟ್ರಕ್ಕೆ ನೀಡುವ ಸ್ವಯಂಸಿದ್ಧ ಹಕ್ಕನ್ನು ಹೊಂದಿದೆ.ಆ ಹಕ್ಕು ದೇಶಕ್ಕಿಲ್ಲವೆನ್ನುವುದುರಾಷ್ಟ್ರ ಹಿತಕ್ಕೆ ವಿರುದ್ಧಅಭಿಪ್ರಾಯವಾಗಲಿದೆ.

ಮೇಲ್ಕಂಡ ವಿಚಾರಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹಲವಾರು ನಿರ್ಣಯಗಳನ್ನು ನೀಡಿದೆ. ಕಾನೂನಿನ ವ್ಯಾಪ್ತಿಯಲ್ಲಿ ಶ್ರೀ ಅರುಣ್‌ಜೇಟ್ಲಿಯವರು ಮಂಡಿಸಿದ ನಿಲುವು ಸಮರ್ಥನೀಯವೂಅಲ್ಲ ಸಮಂಜಸವೂಅಲ್ಲ. ಬೇರುಬರಿಒಕ್ಕೂಟ(ಐ) ಆರ್‌ಇ(1960) 3 ಎಸ್‌ಸಿಆರ್ 250 ಮೊಕದ್ದಮೆಯ ವಿಚಾರಣೆ ನಡೆಸಿದ್ದ ಭಾರತದ ಸರ್ವೋಚ್ಚ ನ್ಯಾಯಾಲಯ ನೀಡಿದ ನಿರ್ದೇಶನದಂತೆ, ಭಾರತಕ್ಕೆ ಸೇರಿದಯಾವುದೇ ಭಾಗವನ್ನು ವಿದೇಶಿ ರಾಷ್ಟ್ರಕ್ಕೆ ನೀಡಲುಅವಕಾಶವಿದ್ದು, ಇದಕ್ಕಾಗಿ ಸಂವಿಧಾನದ ಕಲಂ 368ಗೆ

ಸಂವೈಧಾನಿಕತಿದ್ದುಪಡಿತರಬೇಕಾಗಿದೆ. ಆದರೆಇದಕ್ಕಾಗಿ ಸಂಸತ್‌ನಲ್ಲಿ ಕಾನೂನು ಪಾಸ್ ಮಾಡುವಅವಕಾಶವಿಲ್ಲ.

ಮೇಲ್ಕಂಡತೀರ್ಪಿನಅನುಸಾರ, ಬೇರುಬರಿ ಪ್ರಾಂತ್ಯದ ವಿಚಾರದಲ್ಲಿ, ನಮ್ಮದೇಶಕ್ಕೆ ಸೇರಿದ ಭಾಗವನ್ನುಅನ್ಯರಾಷ್ಟ್ರಕ್ಕೆ ವರ್ಗಾಯಿಸಲು, ಸಂವೈಧಾನಿಕತಿದ್ದುಪಡಿಆವಶ್ಯಕವಾಗಿದೆ.ಆದರೆ ಮೇಲ್ಕಂಡ ವಿಚಾರದಲ್ಲಿ ಸರ್ವೋಚ್ಚ ನ್ಯಾಯಾಲಯ ಸೂಚಿಸಿದಂತೆ, ಭಾರತಕ್ಕೆ ಸೇರಿದಯಾವುದೇ ಭಾಗವನ್ನುಅನ್ಯರಿಗೆ ವರ್ಗಾಯಿಸದಕಾರಣ ಸಂವೈಧಾನಿಕತಿದ್ದುಪಡಿಯಅಗತ್ಯವಿರುವುದಿಲ್ಲ.

ಹಾಗಾಗಿ, ದೋಷಾರೋಪ ಮುಕ್ತ ನಿರ್ಣಯವೆಂದರೆ, ಸಾರ್ವತ್ರಿಕವಾಗಿಒಪ್ಪಿಕೊಂಡ ಸಿದ್ಧಾಂತವನ್ನು ಎತ್ತಿಹಿಡಿದ ಭಾರತದ ಸರ್ವೋಚ್ಚ ನ್ಯಾಯಾಲಯ, ಅಗತ್ಯವಿದ್ದಾಗದೇಶದಗಡಿ ಬದಲಾಯಿಸುವ, ಪ್ರಾಂತ್ಯವನ್ನುಅನ್ಯದೇಶಕ್ಕೆ ವರ್ಗಾಯಿಸುವಅಧಿಕಾರವು ಸಾರ್ವಭೌಮತೆಯ ಸಂಕೇತವಾಗಿದೆಎಂದು ತಿಳಿಸಿದೆ.ಆದರೆಇದಕ್ಕಾಗಿ ಭಾರತದ ಸಂವಿಧಾನದ ಕಲಂ ೩೬೮ರಡಿ ಸಂವೈಧಾನಿಕತಿದ್ದುಪಡಿಅಂಗೀಕರಿಸುವುದುಆವಶ್ಯಕವೆಂದಿದೆ.ಅದರಂತೆ ಈಗ ಸರ್ಕಾರ ಸಂವಿಧಾನದ(೧೧೯ನೇ ತಿದ್ದುಪಡಿ) ಮಸೂದೆಯನ್ನು ಸಂಸತ್‌ನಲ್ಲಿ ಮಂಡಿಸಿತ್ತು.

ಗೌರವಾದರದೊಂದಿಗೆ,

ತಮ್ಮ ವಿಶ್ವಾಸಿ,

(ಸಲ್ಮಾನ್ ಖುರ್ಶೀದ್)

ಮಾಹಿತಿಗಾಗಿಒಂದು ಪ್ರತಿರಾಜ್ಯ ಸಭಾ ಮಹಾ ಕಾರ್ಯದರ್ಶಿಯವರಿಗೆ